## ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 362 (565)
2 ಸದಸ್ಯರ ಹೆಸರು : ಶ್ರೀ ಎಸ್ ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)
. ಉತ್ತರಿಸುವ ದಿನಾಂಕ : 22.12.2022
4 ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ | ರ್ನಾಟಕ ಲೋಕಸೇವಾ ಆಯೋಗ ಡೆಸುವ ಗೆಜೆಟೆಡ್ ಪ್ರೊಬೇಷನರಿ ೇಮಕಾತಿಯಲ್ಲಿ ಕನ್ನಡ ಮಾಧ್ಯಮದವರಿಗಿಂತ ಆಂಗ್ಲ ಮಾಧ್ಯಮದಲ್ಲಿ ಬರೆದವರೇ ಹೆಚ್ಚಾಗಿ ಪಾಸಾಗಿರುವುದು ಬಂದಿದೆಯೇ; | ಕರ್ನಾಟಕ ಲೋಕಸೇವಾ ಆಯೋಗ ನೀಡಿರುವ ಮಾಹಿತಿಯಂತೆ, ಹೌದು. |
| ಆ | ನ್ನಡ ಮಾಧ್ಯಮದವರು ಕೆ.ಪಿ.ಎಸ್.ಸಿ ಯಲ್ಲಿ ಹೆಚ್ಚಾಗಿ ೇರ್ಗಡೆಯಾಗುತ್ತಿಲ್ಲದಿರಲು ಾರಣವೇನು; ತೇರ್ಗಡೆಯಾಗಲು ರ್ಕಾರ/ಲೋಕಸೇವಾ ಆಯೋಗವು ಯಾವ ರೀತಿಯ ಕ್ರಮ ಕೈಗೊಳ್ಳುತ್ತದೆ ;( ಈ ಬಗ್ಗೆ ವಿವರವನ್ನು ನೀಡುವುದು) | ಕರ್ನಾಟಕ ಲೋಕಸೇವಾ ಆಯೋಗ ನೀಡಿರುವ ಮಾಹಿತಿಯಂತೆ, ಗೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಕನ್ನಡ ಅಥವಾ ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆಯನ್ನು ಬರೆಯಲು ಅವಕಾಶವಿದ್ದು, ಅಭ್ಯರ್ಥಿಗಳು ಈ ಎರಡು ಮಾಧ್ಯಮದಲ್ಲಿ ಯಾವುದೇ ಮಾಧ್ಯಮದಲ್ಲಿ ಬರೆದರೂ ಅವರು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಜೇಷ್ಠತೆ, ಮೀಸಲಾತಿ ಮತ್ತು ಅಭ್ಯರ್ಥಿಗಳು ನೀಡುವ ಹುದ್ದೆಗಳ ಆದ್ಯತೆಗನುಗುಣವಾಗಿ ಆಯ್ಕೆ ಮಾಡಲಾಗುತ್ತದೆ. |
| ಇ | ಕೆ.ಎ.ಎಸ್. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ನಡೆಯುವ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಇದರಲ್ಲೂ ಕನ್ನಡ ಮಾಧ್ಯಮದ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ಕುರಿತ ಮೌಲ್ಯ ಮಾಪಕರ ಕೊರತೆಯನ್ನು ಎದುರಿಸುತ್ತದೆಯೇ; ತಜ್ಞ ಕನ್ನಡ ಮಾಧ್ಯಮ ಮೌಲ್ಯ ಮಾಪಕರನ್ನು ನೇಮಿಸಲು ಕೈಗೊಂಡ ಕ್ರಮಗಳೇನು ? ( ಮಾಹಿತಿ ನೀಡುವುದು) | ಕರ್ನಾಟಕ ಲೋಕಸೇವಾ ಆಯೋಗ ನೀಡಿರುವ ಮಾಹಿತಿಯಂತೆ, ಆಯೋಗವು ಪ್ರಸ್ತುತದಲ್ಲಿ ಕನ್ನಡ ಮಾಧ್ಯಮದ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ನುರಿತ ಮೌಲ್ಯಮಾಪಕರ ಕೊರತೆಯನ್ನು ಎದುರಿಸುತ್ತಿಲ್ಲ. |

ಸಂಖ್ಯೆ: ಸಿ ಸುಇ 180 ಎಸ್ಎಸ್‌ಸಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ